6

# ಪ್ರಶ್ನೆ:

# “ಹೊಸ ಒಡಂಬಡಿಕೆಯ ಸಭೆಯನ್ನು ನಾವು ಹೇಗೆ ಗುರುತಿಸಬಹುದು?”

## ಉತ್ತರ:

ರಕ್ಷಣೆಯು ಕೇವಲ ಒಳ್ಳೆಯ, ನೈತಿಕ ಕಾರ್ಯಗಳ ಮೇಲೆ ಮಾತ್ರವೇ ಅವಲಂಭಿಸಿದ್ದರೆ, ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸಲು ಪ್ರಯತ್ನಿಸುವುದು ಸಮಯವನ್ನು ವ್ಯರ್ಥವಾಗಿ ಕಳೆಯುವಂತಾಗುತ್ತದೆ. ಸಭೆಯ ಒಳಗೂ ಹೊರಗೂ ಸಭೆಯು ಸ್ಥಾಪಣೆಯಾಗುವದಕ್ಕಿಂತ ಮೊದಲು ಅತ್ಯುತ್ತಮ ನೈತಿಕತೆಯುಳ್ಳ ಜನರೂ ಮತ್ತು ಈಗ ಉನ್ನತ ತತ್ವಗಳುಳ್ಳ ಕೆಲವರೂ ಇದ್ದಾರೆ. ನೈತಿಕತೆಯು ಪಾಪಿಯನ್ನು ಪರಲೋಕಕ್ಕೆ ಒಯ್ಯುವದಾದರೆ, ಆಗ ಯೇಸುವಿನ ಕ್ರೂರ ಮರಣವು ಅನಾವಶ್ಯಕವಾದದ್ದು ಅರ್ಥವಿಲ್ಲದ್ದೂ ಆಗುತ್ತದೆ. ಹಾಗಿದ್ದರೂ, ಆತನ ರಕ್ತವು ರಕ್ಷಣೆಗೆ ಅಗತ್ಯವಾಗಿದ್ದರೆ, ಆಗ ಆತನ ಸಭೆಯೂ ಅಗತ್ಯವಾಗಿರುತ್ತದೆ, ಯಾಕಂದರೆ ಆತನ ರಕ್ತವು ಸಭೆಯನ್ನು ಕೊಂಡುಕೊಂಡಿತು (ಅಪೊಸ್ತಲರ ಕೃತ್ಯಗಳು 20:28). ಸುವಾರ್ತೆಗೆ ವಿಧೇಯನಾಗುವ ಪ್ರತಿಯೊಬ್ಬ ಪಾಪಿಗಾಗಿ ಆತನ ರಕ್ತವು ವಿಮೋಚನೆಯ ಕ್ರಯವನ್ನು ಕೊಡುತ್ತದೆ - ಮತ್ತು ಆ ಪಾಪಿಯು ಒಮ್ಮೆ ಅಪರಾಧದಿಂದ ಶುದ್ಧೀಕರಿಸಲ್ಪಟ್ಟಾಗ, ರಕ್ಷಿಸಲ್ಪಟ್ಟ ಜನರ ಗುಂಪಿನ ಸದಸ್ಯನಾಗುತ್ತಾನೆ. ಆ ಗುಂಪು ಹೊಸ ಒಡಂಬಡಿಕೆಯ ಸಭೆಯಾಗಿರುತ್ತದೆ. ಆದುದರಿಂದ, ಆ ಗುಂಪಿನ ಸದಸ್ಯನಾಗಿರುವುದು ಅಂದರೆ ಹಿಂದಿನ ಪಾಪಗಳಿಂದ ರಕ್ಷಣೆ ಪಡೆದುಕೊಳ್ಳುವುದು. ಆ ಗುಂಪಿನಲ್ಲಿ ನಂಬಿಗಸ್ತಿಕೆ ಎಂದರೆ ಪರಲೋಕದ ನಿರೀಕ್ಷೆಯುಳ್ಳವನಾಗಿರುವುದು. ಆ ಗುಂಪಿನಿಂದ ಹೊರಗೆ ಇರುವುದು ಅಂದರೆ ರಕ್ಷಣೆಯಿಲ್ಲದೇ ಮತ್ತು ಪರಲೋಕದ ವಾಗ್ದಾನವಿಲ್ಲದೇ ಇರುವಂಥದ್ದು. ಈ ವ್ಯತ್ಯಾಸವು ಒಬ್ಬನು ಸಭೆಯನ್ನು ಗುರುತಿಸುವ ಮತ್ತು ಅದರ ಭಾಗವಾಗುವ ಅಗತ್ಯತೆಯನ್ನು ಒತ್ತಿ ಹೇಳುತ್ತದೆ.

ಕೊರಿಂಥದಲ್ಲಿ, ಪಾಪಿಗಳು ಯೇಸುವಿನ ಕಥೆಯನ್ನು ಕೇಳಿದರು ಮತ್ತು ಆತನಲ್ಲಿ ಬಾಪ್ತಿಸ್ಮ ಹೊಂದಿದರು (ಅಪೊಸ್ತಲರ ಕೃತ್ಯಗಳು 18:8; ನೋಡಿರಿ; ರೋಮಾಪುರ 6:3-5). ಆ ಪಾಪಿಗಳು, ಹಿಂದಿನ ಪಾಪಗಳಿಂದ ಒಂದು ಸಲ ಶುದ್ಧೀಕರಿಸಲ್ಪಟ್ಟವರು, “ಕೊರಿಂಥದಲ್ಲಿರುವ ದೇವರ ಸಭೆ” ಎಂದು ಕರೆಯಲ್ಪಟ್ಟರು (1 ಕೊರಿಂಥ 1:2). ಪಾಪಿಗಳು ಎಲ್ಲಿಯಾದರೂ ಯೇಸುವಿನ ಕಥೆಯನ್ನು ಕೇಳಿ, ವಿಶ್ವಾಸದ ವಿಧೇಯತೆಯಲ್ಲಿ ಅದಕ್ಕೆ ಉತ್ತರ ಕೊಟ್ಟರೆ (ಅಪೊಸ್ತಲರ ಕೃತ್ಯಗಳು 16:31; ರೋಮಾಪುರ 1:5), ಅವರು ಕೂಡಲೇ, ಹೊಸ ಒಡಂಬಡಿಕೆಯ ಸಭೆ ಎಂದು ತಿಳಿಯಲ್ಪಟ್ಟ, ರಕ್ತ ಕ್ರಯದಿಂದ ಕೊಳ್ಳಲ್ಪಟ್ಟ ಮಂಡಳಿಯ ಸದಸ್ಯರಾಗುವರು.

ತಂದೆತಾಯಿಗಳ ಯಥಾರ್ಥವಾದ ಮಕ್ಕಳು ಬಾಪ್ತಿಸ್ಮ ಹೊಂದಿದಾಗ, ಆ

ಮಕ್ಕಳು - ಎಂದೂ ವಿಶ್ವಾಸಿಗಳಾಗಿರದೇ ಇದ್ದವರು ಹೊಸ ಒಡಂಬಡಿಕೆಯ ಸಭೆಯ ಸದಸ್ಯರಾಗಿರುವರು ಎಂದು ಪರಿಶುದ್ಧ ಬರಹಕ್ಕನುಗುಣವಾಗಿ ಹೇಳಲಿಕ್ಕಾಗದು. ತಂದೆತಾಯಿಗಳು ಮತ್ತು/ಇಲ್ಲವೇ ಮಕ್ಕಳು ಚಿಮುಕಿಸಲ್ಪಟ್ಟಾಗ "ಬಾಪ್ತಿಸ್ಮದ ಮೂಲಕ ಆತನೊಂದಿಗೆ ಹೂಣಲ್ಪಡದಿದ್ದಾಗ" (ರೋಮಾಪುರ 6:4), ಅವರು ಹೊಸ ಒಡಂಬಡಿಕೆಯ ಸಭೆಯ ಸದಸ್ಯರಾದರೆಂದು ಸರಿಯಾಗಿ ಹೇಳಲಿಕ್ಕಾಗದು.

ಒಂದು ಸಭೆಯು ಹೊಸ ಒಡಂಬಡಿಕೆಯಲ್ಲಿ ತನ್ನ ಮೂಲವನ್ನು ಕಂಡುಕೊಳ್ಳದಿದ್ದರೆ, ಆದರೆ ಅದಕ್ಕಾಗಿ ಎನ್‌ಸೈಕ್ಲೊಪಿಡಿಯಾದಲ್ಲಿ ಇಲ್ಲವೇ ಸಭಾ ಚರಿತ್ರೆಯ ಪುಸ್ತಕದಲ್ಲಿ ಹುಡುಕಬೇಕಾಗಿದ್ದರೆ, ಅಂಥ ಸಭೆಯು ಹೊಸ ಒಡಂಬಡಿಕೆಯ ಸಭೆ ಎಂದು ಹೇಳಿಕೊಳ್ಳಲಾರದು. ಒಂದು ಸಭೆಗೆ ಅದರ ಪ್ರಾರಂಭವು ಕ್ರಿಸ್ತನ ಮರಣ, ಹೂಣಿಡುವಿಕೆ, ಮತ್ತು ಪುನರುತ್ಥಾನದ ನಂತರದ ಪ್ರಥಮ ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಇರದಿದ್ದರೆ[1] (ನೋಡಿರಿ ಲೂಕ 24:46, 47; ಅಪೊಸ್ತಲರ ಕೃತ್ಯಗಳು 2:41-47; 11:15), ಆಗ ಆ ಸಭೆಯು ಹೊಸ ಒಡಂಬಡಿಕೆಯ ಸಭೆ ಎಂದು ಹೇಳಿಕೊಳ್ಳಲಾರದು.

ಒಂದು ಸಭೆಯು ತನ್ನ ಸ್ಥಾಪಕನಂತೆ ಯಾವುದೇ ಪುರುಷನ ಇಲ್ಲವೇ ಮಹಿಳೆಯ ಕಡೆಗೆ ಹಿಂದುರಿಗಿ ನೋಡಿದರೆ, ಅದು ಕ್ರಿಸ್ತನು ಸ್ಥಾಪಿಸಿದ ಸಭೆಯೆಂದು ಹೇಳಿಕೊಳ್ಳಲಾರದು (ಮತ್ತಾಯ 16:18). ಹೊಸ ಒಡಂಬಡಿಕೆಯ ಪುಸ್ತಕಗಳಲ್ಲದೇ ಇತರ ವಿಶ್ವಾಸ ಸೂತ್ರದ ಪುಸ್ತಕವನ್ನು ಒಂದು ಅನುಸರಿಸಿದರೆ, ಅದು ಹೊಸ ಒಡಂಬಡಿಕೆಯ ಸಭೆ ಎಂದು ಹೇಳಿಕೊಳ್ಳಲಾರದು (ಓದಿರಿ ಯೋಹಾನ 14:26; 16:13; 1 ಯೋಹಾನ 4:6; 2 ಯೋಹಾನ 7-9).

ಇನ್ನೊಂದು ಕಡೆಯಲ್ಲಿ, ಒಂದು ಸಭೆಯು ರೊಟ್ಟಿ ಮುರಿಯಲು ವಾರದ ಮೊದಲನೆಯ ದಿನದಂದು ಕೂಡಿ ಬಂದರೆ (ಅಪೊಸ್ತಲರ ಕೃತ್ಯಗಳು 20:7), ಅದಕ್ಕೆ ಹೊಸ ಒಡಂಬಡಿಕೆಯ ಸಭೆಯಾಗಿರುವ ಒಂದು ಗುರುತು ಇರುವುದು. ಒಂದು ಸಭೆಯು ವಾರದ ಮೊದಲನೆ ದಿನದಂದು ಕರ್ತನ ಕಾರ್ಯಕ್ಕಾಗಿ ತಮ್ಮ ಆದಾಯದಿಂದ ಕೊಡುವ ಸದಸ್ಯರನ್ನೊಳಗೊಂಡಿದ್ದರೆ (1 ಕೊರಿಂಥ 16:1, 2), ಅದಕ್ಕೆ ಒಂದು ಹೊಸ ಒಡಂಬಡಿಕೆಯ ಸಭೆಯ ಗುರುತಿಸುವಿಕೆಯ ಗುರುತನ್ನು ಹೊಂದಿಕೊಂಡಿರುತ್ತದೆ. ಒಂದು ಸಭೆಯು ಕೀರ್ತನೆಗಳನ್ನೂ ಸಂಗೀತಗಳನ್ನೂ ಭಕ್ತಿಯ ಗೀತಗಳನ್ನೂ ಹಾಡಲು ಕೂಡಿಬಂದರೆ (ಎಫೆಸ 5:19), ಅದಕ್ಕೆ ಗುರುತಿಸುವ ಒಂದು ಹೊಸ ಒಡಂಬಡಿಕೆಯ ಸಭೆಯ ಗುರುತು ಇರುತ್ತದೆ. ಇದಕ್ಕೆ ಕೂಡಿಸಿ ಆರಾಧನೆಗಳೊಂದಿಗೆ, ಯಾಂತ್ರಿಕ ವಾದ್ಯಗಳನ್ನು ಬಾರಿಸಲು, ಧೂಪಸುಡಲು, ಇಲ್ಲವೇ ಪ್ರಾರ್ಥನೆಯಲ್ಲಿ ಕ್ಯಾಂಡಲುಗಳನ್ನು ಉರಿಸುವುದಾದರೆ, ಅದಕ್ಕೆ ಹೊಸ ಒಡಂಬಡಿಕೆಯ ಸಭೆಯಲ್ಲಿ ಕಂಡುಬಾರದ ಗುರುತುಗಳಿರುತ್ತವೆ.

ಸಭೆಯು ಭಕ್ತಿಯುಳ್ಳ, ಒಳ್ಳೆಯ ನಡೆತೆಯ ಜನರನ್ನು ಒಳಗೊಂಡಿದ್ದರೆ, ಅದಕ್ಕೆ ಹೊಸ ಒಡಂಬಡಿಕೆಯ ಸಭೆಯ ಗುಣಲಕ್ಷಣಗಳಲ್ಲಿ ಒಂದು ಇರುತ್ತದೆ. ಅದರ ಸದಸ್ಯರು ಲೌಕಿಕರೂ, ಶರೀರದ ದಾಹಗಳಿಗೆ ಒಪ್ಪಿಸಕೊಟ್ಟವರೂ ದುರಾಶೆಯುಳ್ಳವರೂ ಆಗಿದ್ದಾರೆ (ಗಲಾತ್ಯ 5:24, 25; 1 ಯೋಹಾನ 2:15), ಅದು ಹೊಸ ಒಡಂಬಡಿಕೆಯ ನಂಬಿಗಸ್ತ ಸಭೆಯ ಚಿತ್ರಕ್ಕೆ ವಿರುದ್ಧವಾದದ್ದಾಗಿರುತ್ತದೆ.

ಕರ್ತನ ಕಾರ್ಯದಲ್ಲಿ, ಸುವಾರ್ತಾ ಸೇವೆಯಲ್ಲಿಯಂತೆ, ಭಕ್ತಿವೃದ್ಧಿಯಲ್ಲಿಯಂತೆ ಹಾಗೂ ಸಹಾಯ ಮಾಡುವ ಕಾರ್ಯಗಳಲ್ಲಿ (ಅಪೊಸ್ತಲರ ಕೃತ್ಯಗಳು 11:22-24; 29, 30), ಇತರ ಸಭೆಗಳೊಂದಿಗೆ ಒಂದು ಸಭೆಯು ಸಹಕರಿಸಿದರೆ, ಅದಕ್ಕೆ ಹೊಸ ಒಡಂಬಡಿಕೆಯ ಸಭೆಯೊಂದಿಗೆ ಗುರುತಿಸಿಕೊಳ್ಳುವ ಗುರುತು ಇರುತ್ತದೆ. ಅದು

ಸಹಕರಿಸುವದನ್ನು ನಿರಾಕರಿಸಿದರೆ, ಹೊಸ ಒಡಂಡಿಕೆಯ ಸಭೆಯಾಗಿರುವದಕ್ಕೆ ಕೊರತೆಯುಳ್ಳದ್ದಾಗಿರುತ್ತದೆ ಸುವಾರ್ತೆಯನ್ನು ಸಾರುವದರಲ್ಲಿ ವ್ಯಕ್ತಿಗಳೊಂದಿಗೆ ಸಭೆಯು ಸಹಕರಿಸಿದರೆ (ಫಿಲಿಪ್ಪಿ 4:15-17), ದೇವರ ಜನರನ್ನು ಸನ್ನದ್ಧಗೊಳಿಸುವಲ್ಲಿ (ಅಪೊಸ್ತಲರ ಕೃತ್ಯಗಳು 15:3), ಮತ್ತು ದಯಾಕಾರ್ಯದಲ್ಲಿ (ಅಪೊಸ್ತಲರ ಕೃತ್ಯಗಳು 6:1-6), ಸಹಕರಿಸುವದಾದರೆ, ಅದಕ್ಕೆ ಹೊಸ ಒಡಂಬಡಿಕೆಯ ಸಭೆಯ ಹೋಲಿಕೆಯ ಗುರುತು ಇರುವುದು. ಅದು ಸಹಕರಿಸುವದನ್ನು ನಿರಾಕರಿಸಿದರೆ ಅದು ಹೊಸ ಒಡಂಬಡಿಕೆಯ ಬೋಧನೆಗನುಗುಣವಾಗಿ ಅಷ್ಟು ಕೊರತೆಯುಳ್ಳದ್ದಾಗಿರುವುದು.

ಒಂದು ಸಭೆಗೆ ಹೆಸರು ಇದ್ದರೆ, ಅಷ್ಟು ಹೊಸ ಒಡಂಬಡಿಕೆಯ ಸಭೆಯಾಗಿರುವಲ್ಲಿ ಕೊರತೆಯುಳ್ಳದ್ದಾಗಿರುವುದು. ಇದಲ್ಲದೇ, ಅದು ತನ್ನನ್ನು ಒಂದು ಸಭಾಪಂಗಡವಾಗಿ ಮಾಡಿಕೊಂಡಿರುವುದು, ಯಾಕಂದರೆ ಸಭಾಪಂಗಡವು "ಹೆಸರನ್ನಿಟ್ಟುಕೊಳ್ಳುವಂಥದ್ದಾಗಿದೆ" ಸಭಾಪಂಗಡವಾಗಿ ಮಾಡುವಂಥದ್ದು ಅದಕ್ಕೆ ಹೆಸರು ಕೊಡುವಂಥದ್ದಾಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿ ಸಭೆಯ ಹೆಸರಿಗಾಗಿ ಒಬ್ಬನು ವ್ಯರ್ಥವಾಗಿ ಹುಡುಕುತ್ತಾನೆ, ಯಾಕಂದರೆ ಅದು ಸಭಾಪಂಗಡವಲ್ಲದ್ದಾಗಿದೆ, ಅಂದರೆ ಹೆಸರಿಲ್ಲದ್ದಾಗಿದೆ.[2]

---

ಟಿಪ್ಪಣಿಗಳು

[1]"ಯೇಸುವಿನ ಜನನದ ಸಮಯದ ಬಗ್ಗೆ ಬಹಳ ಗಲಿಬಿಲಿಯಿರುತ್ತದೆ. ಕ್ರಿ.ಶ. 1ರಲ್ಲಿ ಡಿಶಂಬರ್ 25ರಂದು ಆತನು ಜನಿಸಲಿಲ್ಲ. ಯೇಸುವಿನ ಜನನವಾದ ಮೇಲೆ ಸುಮಾರು ಆರು ಶತಮಾನಗಳ ನಂತರ ಈ ಘಟನೆಯಿಂದ ಚರಿತ್ರೆಯನ್ನು ಎಣಿಸಲು ಯಾವುದೋ ಪ್ರಯತ್ನವು ಮಾಡಲ್ಪಟ್ಟಿತು. ಡಿಯೊನಿಸಿಯಸ್ ಎಕ್ಸಿಗ್ಯೂಸನು ತನಗಿದ್ದ ಮಾಹಿತಿಯೊಂದಿಗೆ ಹಿಂದಿನ ದಿಕ್ಕಿನಲ್ಲಿ ಕೆಲಸ ಮಾಡಿ, ಅವನು ಸರಿಯಾಗಿದೆಯೆಂದು ತಿಳಿದು ಕೊಂಡ ದಿನಾಂಕವನ್ನು ನೇಮಿಸಿದನು. ಅವನ ಲೆಕ್ಕಾಚಾರದ ಮೇಲೆ, ಕ್ರೈಸ್ತ ಕ್ಯಾಲೆಂಡರ್, ಇನ್ನೂ ಉಪಯೋಗದಲ್ಲಿರುವಂಥದ್ದು ರಚಿಸಲ್ಪಟ್ಟಿತು. ಅನಂತರದಲ್ಲಿ ಅವನ ದಿನಾಂಕವು ಸರಿಯಾಗಿಲ್ಲ ಎಂದು ರುಜುವಾತು ಪಡಿಸಲ್ಪಟ್ಟಿದ್ದು ಕಠಿಣವಾದದ್ದಾಗಿದೆ. ಅವನು ನಾಲ್ಕು ಇಲ್ಲವೇ ಐದು ವರ್ಷ ಹಿಂದೆ ಹೋಗಬೇಕಾಗಿತ್ತು. ಯೇಸುವು ಜನಿಸಿದ ವರ್ಷವು ಕ್ರಿ.ಪೂ. 5 ಇಲ್ಲವೇ ಕ್ರಿ.ಪೂ. 4 ಆಗಿತ್ತು. ಹೆರೋದನ ಮರಣ, ಸ್ನಾನಿಕನಾದ ಯೋಹಾನನ ಸೇವೆಯ ಆರಂಭ, ದೇವಾಲಯವನ್ನು ಕಟ್ಟಿದ್ದು ಇತ್ಯಾದಿ ಹಲವಾರು ಪುರಾವೆಗಳನ್ನು ಅವಲಂಭಿಸಿ ಪಂಡಿತರು ಈ ದಿನಾಂಕದ ಮೇಲೆ ತಮ್ಮ ನಂಬಿಕೆಯನ್ನು ಆಧಾರ ಮಾಡಿಕೊಂಡಿದ್ದಾರೆ. ವಾದವನ್ನು ಮುಂದಿಡಲು ಪ್ರಯತ್ನಿಸದೇ ಈ ತೀರ್ಮಾನದಲ್ಲಿ ವ್ಯವಹಾರಿಕವಾಗಿ ಒಮ್ಮತವುಳ್ಳವರಾಗಿದ್ದಾರೆ ಎಂದು ನಾವು ಹೇಳಬಹುದು" (H. I. Hester, *The Heart of the New Testament* [Liberty, Mo.: Quality Press, 1963], 99); "ಹೆರೋದನ ಮರಣವಾದ ಕೂಡಲೇ ಒಂದು ಗ್ರಹಣ ಸಂಭವಿಸಿತೆಂದು ಜೋಸಿಫಸ್‌ನು ನಮೂದಿಸಿದ್ದಾನೆ (*Antiquities* XVII. vi.4 [167]). ಈ ಗ್ರಹಣದ ದಿನಾಂಕ - ಮಾರ್ಚ್ 12/13, 4 B.C. ಎನ್ನಬಹುದು. ... ನಾವು ಈಗ ಉಪಯೇಗಿಸುತ್ತಿರುವ ಕಾಲಗಣನೆಯ ಪದ್ಧತಿಯು ಆರನೆಯ ಶತಮಾನದಲ್ಲಿ ಮೊದಲು ಉಪಯೋಗಿಸುತ್ತಿದ್ದ ಡಯೊಕ್ಲೇಶಿಯನ್ ಯುಗವನ್ನು ತಳ್ಳಿಬಿಟ್ಟ, ಡಿಯೊನಿಸಿಯಸ್ ಎಕ್ಸಿಗ್ಯೂಸ್‌ನಿಂದ (ಸುಮಾರು ಕ್ರಿ.ಶ. 500-550) ಸಿದ್ಧಪಡಿಸಲ್ಪಟ್ಟಿತು. ತನ್ನ ಪದ್ಧತಿಯಲ್ಲಿ ಡಿಯೊನಿಸಿಯಸ್‌ನು ಕ್ರಿ.ಶ. 1 ಮತ್ತು ರೋಮ್ ಸ್ಥಾಪಿಲ್ಪಟ್ಟಂದಿನಿಂದ 754ನೆಯ ವರ್ಷ ಒಂದೇ ಯಾಗಿರುವಂತೆ ಲೆಕ್ಕಾ ಮಾಡಿದನು; ಆದರೆ ಅವನ ಲೆಕ್ಕಾಚಾರದಲ್ಲಿ ಒಂದು ತಪ್ಪು ಮತ್ತು ಮೇಲೆ ಹೇಳಿದ ಜೋಸಿಫಸ್‌ನ ಮಾಹಿತಿಯು ಅನಂತರದ ವೃತ್ತಾಂತಕಾರರು ಯೇಸುವಿನ ಜನನವು ಹೆರೋದನ ಮರಣಕ್ಕಿಂತ - ಮೊದಲು ಕ್ರಿ.ಪೂ. 4ಕ್ಕಿಂತ - ನಂತರ ಆಗಿರುವದಿಲ್ಲವೆಂದು ನಿರ್ಣಯಿಸಲು ಒತ್ತಾಯಿಸಲ್ಪಟ್ಟರು" (Jack P. Lewis, *The Gospel According to Matthew*, Part 1, The Living Word Commentary [Austin, Tex.: Sweet Publishing Co., 1976], 50, 51). [2]NASBಯ ಪ್ರಕಾರ ಕರ್ತನ ಸಭೆಗೆ ಈ ಕೆಳಗಿನ ಅಂಕಿತಗಳು ಕೊಡಲ್ಪಟ್ಟಿವೆ:

(1) "ನನ್ನ ಸಭೆ" (ಮತ್ತಾಯ 16:18), 1 ಸಲ,

(2) “ಸಭೆ” (ಮತ್ತಾಯ 18:17), 63 ಸಲ, ಇಲ್ಲವೇ “ಸಭೆಗಳು,” ಸುಮಾರು 29 ಸಲ,
(3) “ದೇವರ ಸಭೆ” (1 ಕೊರಿಂಥ 1:2), ಸುಮಾರು 9 ಸಲ; “ದೇವರ ಸಭೆಗಳು,” 3 ಸಲ,
(4) “ಅನ್ಯರ ಸಭೆಗಳು” (ರೋಮಾಪುರ 16:4), 1 ಸಲ,
(5) “ಕ್ರಿಸ್ತನ ಸಭೆಗಳು” (ರೋಮಾಪುರ 16:16), 1 ಸಲ,
(6) “ದೇವ ಜನರ ಸಭೆಗಳು” (1 ಕೊರಿಂಥ 14:34). 1 ಸಲ,
(7) “ಚೊಚ್ಚಲು ಮಕ್ಕಳ ಸಭೆ” (ಇಬ್ರಿಯ 12:23), 1 ಸಲ.

ಹೀಗೆ ಸಭೆಯ ಏಳು ಭಿನ್ನವಾದ ವರ್ಣನೆಗಳಿದ್ದು ಅದರಲ್ಲಿಯ ಜನರನ್ನು ತೋಲಿಸುತ್ತದೆ, ಅವರ ಕರೆಯನ್ನು ಅವರ ಒಡೆತನವನ್ನು ತೋಲಿಸುತ್ತವೆ. ಆದರೆ ಯಾವುದೇ ಹೆಸರನ್ನು ಒದಗಿಸುವದಿಲ್ಲ. ಹೊಸ ಒಡಂಬಡಿಕೆಯ ಸಭೆಗೆ ಯಾರಾದರೂ ಒಂದು ಹೆಸರನ್ನು ಕೊಟ್ಟರೆ, ಅವನು ಆತ್ಮನು ಮಾಡದೇ ಇರುವದನ್ನು ಮಾಡುತ್ತಿರುವನು.

© 2009 Truth for Today